544(942) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಶಿಕ್ಷಣ ಮಗುವಿನ ಮೂಲಭೂತ ಹಕ್ಕು, 1ನೇ ತರಗತಿಯಿಂದ ಮಾತೃಭಾಷೆ, ಆಂಗ್ಲ ಭಾಷೆ ಕಲಿಕೆ ಮುಂತಾದವುಗಳನ್ನು ನಿರ್ಧರಿಸುವ ಹಕ್ಕು ಸರ್ಕಾರಕ್ಕೆ ಇದೆಯೇ,

ಆ) ಇದ್ದಲ್ಲಿ, ಭಾಷಾ ನೀತಿ ಉಲ್ಲಂಘನೆಯ ಆಧಾರ ಮೇಲೆ 1400 ಶಾಲೆಗಳ ಪರವಾನಿಗೆ ಸ್ಥಗಿತಗೊಳಿಸುವ ನಿರ್ಧಾರ ಬದಲಿಕೆಗೆ ಕಾರಣಗಳೇನು,

ಇ) ಇದೇ ನಿಟ್ಟಿನಲ್ಲಿ 1ನೇ ತರಗತಿಯಿಂದ ಆಂಗ್ಲ ಭಾಷೆ ಕಲಿಸುವ ಉದ್ದೇಶವೇನು,

ಈ) ಶಾಲೆಗಳಲ್ಲಿ ಮೊಟ್ಟೆ ವಿತರಿಸುವ ಬಗ್ಗೆ ಗೊಂದಲ ಸೃಷ್ಟಿಸುವಲ್ಲಿ ಹಾಗೂ ನಿವಾರಣೆಯಲ್ಲಿ ಸರ್ಕಾರದ ನಿಲುವೇನು, ಮಗುವಿನ ನಿರ್ಧಾರಕ್ಕೆ ಬಿಡುವಲ್ಲಿ ಸರ್ಕಾರಕ್ಕೆ ಇರುವ ಸಮಸ್ಯೆ ಏನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಇದೆ

ಆ) ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲಿ ಶಾಲೆಯನ್ನು ಮುಚ್ಚಿಸಿದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದರಿಂದ ಭಾಷಾ ನೀತಿ ಉಲ್ಲಂಘಿಸಿರುವ ಶಾಲೆಗಳ ಮಾನ್ಯತೆಯನ್ನು ರದ್ದುಪಡಿಸಿದ ಆದೇಶಗಳನ್ನು ಹಿಂಪಡೆಯದೇ, ದಿ 6 11 2006 ಸರ್ಕಾರದ ಆದೇಶ ಸಂಖ್ಯೆ ಇಡಿ 203 ಪಿಜಿಸಿ 2005ರನ್ವಯ ಏಪ್ರಿಲ್ 10, 2007ರವರೆಗೆ ಆ ರದ್ದತಿ ಆದೇಶಗಳ ಜಾರಿಗೊಳಿಸುವಿಕೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ

ಇ) ಪ್ರಸ್ತುತ 5ನೇ ತರಗತಿಯಿಂದ ಆಂಗ್ಲ ಭಾಷೆಯನ್ನು ಕಲಿಸಲಾಗುತ್ತಿದೆ ಇದರಿಂದ, ಆಂಗ್ಲ ಭಾಷೆಯ ಮೇಲೆ ಹಿಡಿತ ಕಡಿಮೆಯಾಗಿ, ಬಹುಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಎಸ್ ಎಸ್ ಎಲ್ ಸಿ ಮಟ್ಟದಲ್ಲಿ ಆಂಗ್ಲ ಭಾಷಾ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುತ್ತಿದ್ದಾರೆ 1ನೇ ತರಗತಿಯಿಂದಲೇ ಆಂಗ್ಲ ಭಾಷೆಯನ್ನು ಕಲಿಸಿದಲ್ಲಿ, ಇಂತಹ ಪ್ರತಿಕೂಲ ಪರಿಣಾಮ ತಡೆಗಟ್ಟಲು

ಸಾಧ್ಯವಾಗುತ್ತದೆ ಈ ರೀತಿ ಗ್ರಾಮೀಣ ಮತ್ತು ಬಡವರ್ಗದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮತ್ತು ವಿದ್ಯಾರ್ಥಿಗಳ ಪೋಷಕರ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು, 2007–08ನೇ ಸಾಲಿನಿಂದ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲೀಷನ್ನು ಒಂದು ವಿಷಯವನ್ನಾಗಿ (ಎರಡನೇ ಭಾಷೆಯಾಗಿ) ಕಲಿಸಲು ದಿ 20 10 2006ರ ಸರ್ಕಾರದ ಆದೇಶ ಸಂಖ್ಯೆ ಇಡಿ 37 ಪಿಜಿಸಿ 2003 ರನ್ವಯ ಆಸ್ಪದವನ್ನು ಕಲ್ಪಿಸಲಾಗಿದೆ

ಈ) ಮೊಟ್ಟೆ ವಿತರಿಸುವ ಬಗ್ಗೆ ಸರ್ಕಾರವು ತಾತ್ಕಾಲಿಕ ತಡೆಯಾಜ್ಞೆ ನೀಡಿದೆ

546(945) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮದಲ್ಲಿ ಶಿಕ್ಷಕರು ತೊಡಗಿರುವುದರಿಂದ ಪಾಠ ಪ್ರವಚನಗಳು ಕುಂಠಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಗ್ಯಾಸ್ ತರಕಾರಿ, ವಗೈರೆ ತರಲು ಶಿಕ್ಷಕರು ಸಮಯ ಹಾಳು ಮಾಡುತ್ತಿರುವುದು ನಿಜವಲ್ಲವೇ,

ಇ) ಈ ಕಾರ್ಯಕ್ರಮದ ಉಸ್ತುವಾರಿಯನ್ನು ನೋಡಿಕೊಳ್ಳುವ ಯಾರಾದರೂ ಮೇಲ್ವಿಚಾರಕರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಸರ್ಕಾರ ಚಿಂತನೆ ನಡೆಸಿದೆಯೇ, ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ), ಆ) ಮತ್ತು ಇ) ಎಸ್ ಡಿ ಎಂ ಸಿ ಅಧ್ಯಕ್ಷರು ಮತ್ತು ಮುಖ್ಯ ಅಡುಗೆಯವರನ್ನು ಬಿಸಿಯೂಟ ಕಾರ್ಯಕ್ರಮ ಅನುಷ್ಠಾನಗೊಳಿಸಲು ಜವಾಬ್ದಾರರನ್ನಾಗಿ ಮಾಡಲಾಗಿದೆ ಮುಖ್ಯ ಶಿಕ್ಷಕರು, ಅಡುಗೆ ಸಿಬ್ಬಂದಿಗೆ ಪ್ರತಿ ದಿನದ ವಿದ್ಯಾರ್ಥಿಗಳ ಹಾಜರಾತಿಯನ್ನು ನೀಡುವುದು ಮತ್ತು ಊಟ ಬಡಿಸುವಾಗ ಮೇಲ್ವಿಚಾರಣೆ ಮಾತ್ರ ಮಾಡಲು ಸೂಚನೆ ನೀಡಲಾಗಿದೆ ಇದನ್ನು ಹೊರತುಪಡಿಸಿ ಶಿಕ್ಷಕರಿಗೆ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಬೇರೆ